

# ಜಾಣೆ ಜಾಹ್ನವಿ

ಜಾಹ್ನವಿ ಕಪೂರ್ ಅಭಿನಯಿಸಿದ ಯಾವ ಚಿತ್ರಗಳೂ ಈ ವರ್ಷ ಬಿಡುಗಡೆ ಕಾಣುವುದಿಲ್ಲ. ಆದರೆ ಮುಂದಿನ ವರ್ಷ ಈಕೆಯ ಒಟ್ಟು ನಾಲ್ಕು ಚಿತ್ರಗಳು ತೆರೆ ಕಾಣಲಿವೆ. ಹಾಗೆಂದೇ ಸದ್ಯಕ್ಕೆ ಇನ್‌ಸ್ಟಾಗ್ರಾಂನಲ್ಲಿ ಈಕೆ ಒಂದರ ಹಿಂದೆ ಒಂದರಂತೆ ತನ್ನ ಚಿತ್ರವಿಚಿತ್ರ ಫೋಟೊಗಳನ್ನು ಏರಿಸುತ್ತಲೇ ಇದ್ದಾಳೆ. ಇನ್‌ಸ್ಟಾದಲ್ಲಿ ಈಕೆಯನ್ನು ಹಿಂಬಾಲಿಸುವವರ ಸಂಖ್ಯೆ 43 ಲಕ್ಷ ದಾಟಿದೆ. ಅಮ್ಮ ಶ್ರೀದೇವಿಗಿಂತಲೂ ಮಿಗಿಲಾಗಿ, ಮಗಳಿಗೆ ಫೋಟೊ ಕ್ರೇಝ್ ಇದ್ದಂತಿದೆ.

ಮುಂದಿನ ವರ್ಷ, ಈಕೆ ನಟಿಸಿದ ಗುಂಜನ್ ಸಕ್ಸೇನಾಳ ಜೀವನಾಧಾರಿತ ಚಿತ್ರ ಮೊದಲು ತೆರೆಗೆ ಬರಲಿದೆ. ಭಾರತೀಯ ವಾಯುಪಡೆಯಲ್ಲಿ ಮೊತ್ತಮೊದಲಿಗೆ ಅಧಿಕಾರಿಗಳಾದ ಇಬ್ಬರು ಮಹಿಳೆಯರಲ್ಲಿ ಒಬ್ಬಳಾದ ಹೆಲಿಕಾಪ್ಟರ್ ಪೈಲಟ್ ಗುಂಜನ್ ಸಕ್ಸೇನಾ, ಕಾರ್ಗಿಲ್ ಯುದ್ಧದಲ್ಲಿ ಭಾಗವಹಿಸಿ ಭಾರತದಲ್ಲಿ ಮೊದಲ ಬಾರಿಗೆ ಶೌರ್ಯ ಚಕ್ರ ಪಡೆದ ಮಹಿಳೆ. 'ರೂಹ್ ಅಫ್ಝಾ' ಎನ್ನುವ ಹಾರರ್ ಕಾಮಿಡಿ, 'ತಖ್ತ್' ಮತ್ತು 'ರಣ್‌ಭೂಮಿ' ಭಾರೀ ತಾರಾಗಣದ ಚಿತ್ರಗಳು ಆ ಬಳಿಕ ಬರಲಿವೆ. ಇತ್ತೀಚೆಗೆ ಈಕೆಗೆ ಟೀವಿ ಷೋ ಒಂದರಲ್ಲಿ ಕೇಳಿದ್ದ ಪ್ರಶ್ನೆ– 'ಅವಕಾಶ ಸಿಕ್ಕಿದರೆ ವಿಕಿ ಕೌಶಲ್ ಮತ್ತು ಕಾರ್ತಿಕ್ ಆರ್ಯನ್ ಈ ಇಬ್ಬರಲ್ಲಿ ಯಾರನ್ನು ಕಿಸ್ ಮಾಡಲು ಬಯಸುತ್ತೀ?' ಎಂದು. ಜಾಣೆ ಜಾಹ್ನವಿ, ಬುದ್ಧಿವಂತಿಕೆಯಿಂದ ವಿಕಿ ಕೌಶಲ್ ಎಂದಳು! ಈಗಾಗಲೇ ಮಾಧ್ಯಮಗಳಲ್ಲಿ ಈಕೆಯ ಲವ್ ಅಫೇರ್‌ಗಳ ಕುರಿತು ಸಾಕಷ್ಟು ಗಾಳಿಸುದ್ದಿಗಳು ಹರಿದಾಡುತ್ತಿವೆ. ಬಾಲ್ಯದ ಗೆಳೆಯ ಅಕ್ಷತ್ ರಾಜನ್ ಜೊತೆಗೆ ಮೊದಲು ಸುದ್ದಿ ಹಬ್ಬಿದರೆ, ಬಳಿಕ 'ದಢಕ್' ಚಿತ್ರದ ಹೀರೊ ಇಶಾನ್ ಖಟ್ಟರ್ ಜೊತೆಗೆ ಪ್ರೇಮವಿದೆಯೆಂಬ ಸುದ್ದಿಗಳು ಹರಡಿದವು. ಇದೀಗ ಶಿಖರ್ ಪಹಾರಿಯಾ ಎಂಬ ಗೆಳೆಯನ ಜೊತೆಗೆ ಮುತ್ತಿಕ್ಕುವ ಚಿತ್ರಗಳೂ ಜಾಲತಾಣದಲ್ಲಿ ಕಾಣಸಿಗುತ್ತಿವೆ. ಅಭಿಮಾನಿಗಳ ಗೊಂದಲವನ್ನು ಹೆಚ್ಚಿಸುವಂತೆ ಈಕೆ ಈಗ ವಿಕಿ ಕೌಶಲ್‌ನ ಹೆಸರು ಹೇಳಿದ್ದಾಳೆ. ಸುದ್ದಿಯಲ್ಲಿ ಇರೋದಕ್ಕೆ ಪ್ರತಿಭೆ ಮಾತ್ರ ಸಾಲದು, ಬುದ್ಧಿವಂತಿಕೆಯೂ ಬೇಕು ಎನ್ನುವುದು ಈಕೆಗೆ ಚೆನ್ನಾಗಿ ಗೊತ್ತಿದ್ದಂತಿದೆ.



# ಡಾನ್ಸ್ ದಿಶಾ ಡಾನ್ಸ್

ಸಲ್ಮಾನ್ ಖಾನ್ ಅಭಿನಯದ ಹೊಸ ಚಿತ್ರ 'ಭಾರತ್' ಟ್ರೇಲರ್ ಬಿಡುಗಡೆಯಾದ ಬಳಿಕ ಎಲ್ಲರ ಗಮನ ದಿಶಾ ಪಟಾನಿ (ಆಕೆ ತನ್ನ ಹೆಸರನ್ನು ಪಾಟ್ನಿ ಎಂದೇ ಉಚ್ಚರಿಸುತ್ತಾಳೆ!)ಯತ್ತ ಹರಿದಿದೆ. ಸಲ್ಮಾನನ ಫೇವರೆಟ್ ನಟಿ ಕತ್ರೀನಾ ಕೈಫ್ ಈ ಸಿನಿಮಾದಲ್ಲಿ ಮುಖ್ಯ ಪಾತ್ರದಲ್ಲಿದ್ದರೂ, ದಿಶಾ ಜೊತೆಗೆ ಸಲ್ಮಾನ್‌ನ ಹಾಡೊಂದು ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದೆ. ಫಿಟ್‌ನೆಸ್ ಮತ್ತು ಡಾನ್ಸ್ ತಂತ್ರಗಳೆರಡನ್ನೂ ಅತ್ಯುತ್ತಮವಾಗಿ ಮೇಳೈಸಿಕೊಂಡಿರುವ ಈ ಸೂಪರ್ ಮಾಡೆಲ್, ಸದ್ಯಕ್ಕೆ ಬಾಲಿವುಡ್‌ನ ಹಾಟ್ ಫೇವರೆಟ್. ಹಬ್ಬದ ಹೊತ್ತಿಗೆ 'ಭಾರತ್' ಬಿಡುಗಡೆಯಾದ ಬಳಿಕ ಈಕೆಯ ಕಾಲ್‌ಷೀಟ್ ಮೊತ್ತ ಇನ್ನಷ್ಟು ಎತ್ತರಕ್ಕೇರುವ ಸಂಭವವಿದೆ.

27ರ ಹರೆಯದ ಈ ನೀಳಕಾಲುಗಳ ಸುಂದರಿ ಮೊದಲು ಬೆಳ್ಳಿತೆರೆಗೆ ಅಡಿಯಿಟ್ಟದ್ದು 'ಕುಂಗ್‌ಫು ಯೋಗ' ಚಿತ್ರದ ಮೂಲಕ. ಕಳೆದ ಎರಡು ವರ್ಷಗಳಲ್ಲಿ 'ಎಂ.ಎಸ್. ಧೋನಿ' ಮತ್ತು 'ಬಾಗಿ–2' ಎಂಬ ಸೂಪರ್‌ಹಿಟ್ ಚಿತ್ರಗಳಲ್ಲಿ ನಟಿಸಿ ಹದಿಹರೆಯದವರಲ್ಲಿ ಕಿಚ್ಚು ಹತ್ತಿಸಿದವಳೀಕೆ. ಅದರಲ್ಲೂ ಟೈಗರ್ ಶ್ರಾಫ್ ಜೊತೆಗೆ ನಟಿಸಿದ 'ಬಾಗಿ–2' 100 ಕೋಟಿ ರೂಪಾಯಿ ಕಲೆಕ್ಷನ್ ದಾಟಿ ದಾಖಲೆ ನಿರ್ಮಿಸಿತು. ಆ ಬಳಿಕ ಟೈಗರ್ ಮತ್ತು ಈಕೆಯ ನಡುವೆ ರೊಮ್ಯಾನ್ಸ್ ಸುದ್ದಿಗಳೂ ಹರಡಿದವು. ಇಬ್ಬರೂ ಪರಸ್ಪರರಿಗೆ 'ಫಿಕ್ಸ್' ಆಗಿದ್ದಾರೆಂದೂ ಸುದ್ದಿಯಿದೆ.

'ಭಾರತ್' ಚಿತ್ರದಲ್ಲಿ ದಿಶಾಳ ನೃತ್ಯ ಮತ್ತು ಸ್ಟಂಟ್‌ಗಳನ್ನು ನೋಡಿ ಸಲ್ಲೂ ಮಿಯಾ ಕೂಡಾ ಫಿದಾ ಆಗಿದ್ದಾನಂತೆ. ಚಿತ್ರದಲ್ಲಿ ಆ ಹಾಡು ಮೊದಲ ದೃಶ್ಯವೂ ಹೌದು. ಬಾಲಿವುಡ್‌ನಲ್ಲಿ ಸದ್ಯಕ್ಕೆ ಈಕೆಯೇ ಅತ್ಯಂತ ಕಿರಿಯ ವಯಸ್ಸಿನ ಹಾಟ್ ಸೂಪರ್‌ಮಾಡೆಲ್. ಭಾರತೀಯ ಬ್ರ್ಯಾಂಡ್‌ಗಳ ಪ್ರಚಾರಕ್ಕೆ ಮಾತ್ರವಲ್ಲ, ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳಿಗೂ ಈಗ ದಿಶಾಳೇ ಬೇಕು. ದಿಶಾಳ ಈ ಫಿಟ್‌ನೆಸ್ ಗುಟ್ಟೇನು.. ಎಂದು ಕೇಳಿದರೆ, 'ಏನಿಲ್ಲ, ಚೆನ್ನಾಗಿ ಶ್ರಮಪಡುವುದು' ಎಂದಿದ್ದಾಳೆ. ಕಿಕ್‌ಬಾಕ್ಸಿಂಗ್ ಮತ್ತು ಡಾನ್ಸ್ ಈಕೆಯ ದಿನನಿತ್ಯದ ಅಭ್ಯಾಸಗಳಲ್ಲಿ ಮುಖ್ಯವಾದದ್ದು. 'ತಿನ್ನೋದಕ್ಕೆ ಹಿಂದೆಮುಂದೆ ನೋಡಬೇಡಿ. ಚೆನ್ನಾಗಿ ತಿನ್ನಿ. ಆದರೆ ಆರೋಗ್ಯಕರ ಊಟದ ಅಭ್ಯಾಸ ಇಟ್ಟುಕೊಳ್ಳಿ. ನನ್ನನ್ನು ನೋಡಿ– ಚಿಕನ್, ಮೊಟ್ಟೆ, ಚಪಾತಿ, ರೈಸ್, ಡೆಸರ್ಟ್, ಐಸ್‌ಕ್ರೀಮ್, ಸಲಾಡ್ ಯಾವುದನ್ನೂ ಬಿಡುವುದಿಲ್ಲ. ಆದರೆ ಸಕ್ಕರೆಯ ಬಗ್ಗೆ ಎಚ್ಚರದಿಂದಿರಿ' ಎಂದು ನಗುತ್ತಾಳೆ ಈ ಸುಂದರಿ.

■ ಬಿಂದು